ಸಾಕ್ಷಿಯನ್ನು ದಿನಾಂಕಃ 02.07.2025 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಕೆ.ಆರ್.ಎನ್. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಅಫಿಡವಿಟ್ ಮುಖಾಂತರ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ವಿಚಾರ ನನ್ನ ತಿಳುವಳಿಕೆ ಮತ್ತು ನಂಬಿಕೆಯ ಮಟ್ಟಕ್ಕೆ ಸರಿ ಇದೆ.

ನಾನು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

ಎಂ.ಸಿ. ನಂಃ 41/2021 ರ ತೀರ್ಪಿನ ದೃಢೀಕೃತ ಪ್ರತಿಯನ್ನು ನಿ.ಆರ್.3 ಎಂದು, ಅದರ ಜೊತೆಗೆ ಮೊಬೈಲ್ ಫೋನಿನಲ್ಲಿ ಆದ ಸಂಭಾಷಣೆಯ 5 ಪುಟಗಳ ಪ್ರತಿಯನ್ನು ಒಟ್ಟುಗೂಡಿಸಿ ನಿ.ಆರ್.4 ಎಂದು, ದಿನಾಂಕಃ 17.12.2020 ರಂದು ತಮ್ಮ ವಕೀಲರ ಮೂಲಕ ಅರ್ಜಿದಾರರ ವಕೀಲರಿಗೆ ನೀಡಿದ ನೋಟಿಸಿನ ಪ್ರತಿಯನ್ನು ನಿ.ಆರ್.5 ಎಂದು, ಅಂಚೆ ರಸೀದಿಯನ್ನು ನಿ.ಆರ್.6 ಎಂದು, ಎಂ.ಸಿ. ನಂಃ 41/2021 ರ ಆದೇಶದ ಪ್ರತಿಯನ್ನು ನಿ.ಆರ್. 7 ಎಂದು, ಎಂ.ಸಿ. ನಂಃ 41/2021 ರ ಪ್ರಕರಣದಲ್ಲಿ ಅರ್ಜಿದಾರಳಿಗೆ ನೀಡಿದ ಸಮನ್ಸನ ಪ್ರತಿ ಹಾಗೂ ಅಂಚೆ ಸ್ವೀಕೃತಿಯ ದೃಢೀಕೃತ ಪ್ರತಿಯನ್ನು ನಿ.ಆರ್.8 ಮತ್ತು 9 ಎಂದು, ಮಾಹಿತಿ ಹಕ್ಕು ಕಾಯ್ದೆ ಯಡಿಯಲ್ಲಿ ನೀಡಿದ ಅರ್ಜಿಯ ಪ್ರತಿಗಳನ್ನು ಕ್ರಮವಾಗಿ ನಿ.ಆರ್.10 ಮತ್ತು ನಿ.ಆರ್.11 ಎಂದು, ಅಂಚೆ ರಸೀದಿಯನ್ನು ನಿ.ಆರ್. 12 ಎಂದು, ಅಂಚೆ ಸ್ವೀಕೃತಿಯನ್ನು ನಿ.ಆರ್.13 ಎಂದು, ಪೋಸ್ಟಲ್ ಆರ್ಡರನ ಪ್ರತಿಯನ್ನು ನಿ.ಆರ್.14 ಎಂದು, ಎನ್ವಲಪ್‌ನ ಪ್ರತಿಯನ್ನು ನಿ.ಆರ್. 15 ಎಂದು, ಅಂಚೆ ಸ್ವೀಕೃತಿಯನ್ನು ನಿ.ಆರ್.16 ಎಂದು, ಮಾಹಿತಿ ಹಕ್ಕು ಕಾಯ್ದೆ ಯಡಿಯಲ್ಲಿ ತಹಶೀಲ್ದಾರರವರಿಗೆ ನೀಡಿದ ಅರ್ಜಿಯನ್ನು ಪ್ರತಿಯನ್ನು ನಿ.ಆರ್. 17 ಎಂದು, ಅಂಚೆ ರಸೀದಿಯನ್ನು ನಿ.ಆರ್.18 ಎಂದು, ಎನ್ ವೆಲಾಪ್ ನ ಪ್ರತಿಯನ್ನು ನಿ.ಆರ್. 19 ಎಂದು, ಅಂಚೆ ಸ್ವೀಕೃತಿಯನ್ನು ನಿ.ಆರ್.20 ಎಂದು, ಮಜರೆಲ್ಲೊ ಹೆಚ್.ಪಿ.ಎಸ್. ಕಾಸರಕೋಡರವರಿಗೆ ಮಾಹಿತಿ ಹಕ್ಕು ಕಾಯ್ದೆ ಯಡಿಯಲ್ಲಿ ನೀಡಿದ ಅರ್ಜಿಯ ಪ್ರತಿಯನ್ನು ನಿ.ಆರ್.21 ಎಂದು, ಅರ್ಜಿದಾರಳ ಆಧಾರ ಕಾರ್ಡಿನ ಪ್ರತಿಯನ್ನು (ಅರ್ಜಿದಾರರ ತಕರಾರಿಗೊಳಪಟ್ಟಂತೆ) ನಿ.ಆರ್. 21(ಎ) ಎಂದು, ವಾಹನ ಈ-ಸರ್ವಿಸಸ್‌ನ ದೃಢೀಕೃತ ಪ್ರತಿಯನ್ನು ನಿ.ಆರ್.22 ಎಂದು, ದಿನಾಂಕಃ 15.03.2021 ರ ಮೆಡಿಕಲ್ ರಸೀದಿಯ ಪ್ರತಿಯನ್ನು ನಿ.ಆರ್. 23 ಎಂದು, ಅಂಚೆ ರಸೀದಿಯನ್ನು ನಿ.ಆರ್.24 ಎಂದು, ಅಂಚೆ ಸ್ವೀಕೃತಿಯನ್ನು ನಿ.ಆರ್.25 ಎಂದು, 6 ಫೋಟೋಗಳನ್ನು (ಅರ್ಜಿದಾರರ ತಕರಾರಿಗೊಳಪಟ್ಟಂತೆ) ಕ್ರಮವಾಗಿ ನಿ.ಆರ್. 26 ರಿಂದ ನಿ.ಆರ್.31 ಎಂದು ಗುರುತಿಸಲಾಯಿತು. (ಕಲಂ 63 ಬಿ.ಎನ್.ಎಸ್. ನಲ್ಲಿ ಸಲ್ಲಿಸಿದ ಪ್ರಮಾಣ ಪತ್ರವನ್ನು ಕಡತಕ್ಕೆ ತೆಗೆದುಕೊಳ್ಳಲಾಗಿದೆ.)

**ಪಾಟೀ ಸವಾಲುಃ ಶ್ರೀ ಹೆಚ್.ಯು.ಎನ್. ವಕೀಲರಿಂದಃ**

(ಈ ಹಂತದಲ್ಲಿ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.